# ಮರಳಿತು ದೃಷ್ಟಿ; ಬೆಳಕು ನೀಡಿತು ಶಸ್ತ್ರಚಿಕಿತ್ಸೆ

**ಅಕ್ಷಿಪಟಲಕ್ಕೆ ಕಲ್ಲಿನ ಚೂರು ಸಿಡಿದು ತೀವ್ರ ಪೆಟ್ಟಾಗಿ ದೃಷ್ಟಿ ಕಳೆದುಕೊಂಡಿದ್ದ ಮಹಿಳೆ ಬಾಳಿನಲ್ಲಿ ಅಂಧಕಾರವೇ ತುಂಬಿಹೋಯಿತಲ್ಲಾ ಎಂದು ಚಡಪಡಿಸುವ ವೇಳೆಗೆ ವರವಾಗಿ ಪರಿಣಮಿಸಿದ್ದು ಸಂಕೀರ್ಣವಾದ ಶಸ್ತ್ರಚಿಕಿತ್ಸೆ. ದೂರದ ಯೆಮನ್‌ನಿಂದ ಬಂದ ಮಹಿಳೆಗೆ ದೃಷ್ಟಿ ಮರಳಿ ಬರಲು ವೈದ್ಯರು ಪಟ್ಟ ಶ್ರಮ ಅಂತಿಂಥದ್ದಲ್ಲ.**

■ **ಉಮಾ ಅನಂತ್**

ಯೆಮನ್ ದೇಶದ 53 ವರ್ಷದ ಅಬ್ದೆಲ್ಲಾ ಇಲ್ಹಾಂ ಎಂಬ ಮಹಿಳೆಗೆ ಅಲ್ಲಿ ಯುದ್ಧ ನಡೆಯುತ್ತಿದ್ದಾಗ ಸಂಭವಿಸಿದ ಬಾಂಬ್‌ಸ್ಫೋಟದಲ್ಲಿ ಕಲ್ಲಿನ ಚೂರು ಸಿಡಿದು ಬಲಗಣ್ಣಿನ ಅಕ್ಷಿಪಟಲಕ್ಕೆ ಬಲವಾದ ಪೆಟ್ಟಾಗಿತ್ತು. ಕಣ್ಣಿನ ಮಸೂರ ಛಿದ್ರ ಛಿದ್ರವಾಗಿತ್ತು. ಎಡಗಣ್ಣನ್ನು ಮೊದಲೇ ಕಳೆದುಕೊಂಡಿದ್ದ ಅಬ್ದೆಲ್ಲಾ ಬದುಕಿನಲ್ಲಿ ಅಕ್ಷರಶಃ ಅಂಧಕಾರ ತುಂಬಿಕೊಂಡಿತ್ತು.

ವೈದ್ಯರ ಬಳಿ ಹೋದರೆ ದೃಷ್ಟಿ ಮರುಕಳಿಸಬಹುದು ಎಂಬ ದೂರದ ಆಸೆ ಹೊತ್ತು ಅಲ್ಲಿಯೇ ಸಮೀಪದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋದರೆ ಅಕ್ಷಿಯಲ್ಲಿ ಬೆಳಕು ಕಾಣುವುದು ದೂರದ ಮಾತೇ ಆಯಿತು. ಚಿಕಿತ್ಸೆ ಪಡೆದು ದೃಷ್ಟಿ ಮರಳಿ ಪಡೆಯಲೇಬೇಕು ಎಂಬ ಈ ಮಹಿಳೆಯ ಹಟ ಯಶ ಸಾಧಿಸಿದ್ದು ಆಕೆ ಕುಟುಂಬ ಸಮೇತ ಬೆಂಗಳೂರಿನ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಗೆ ಬಂದು ಸಂಕೀರ್ಣವಾದ ಸರ್ಜರಿ ಮಾಡಿಸಿದಾಗ. ಅಬ್ದೆಲ್ಲಾ ಅವರ ಕಣ್ಣಿನ ಶಸ್ತ್ರಚಿಕಿತ್ಸೆ ಬಹಳ ಸಂಕೀರ್ಣ ಹಾಗೂ ಸವಾಲಿನದಾಗಿತ್ತು. ಬಲಗಣ್ಣಿಗೆ ಬಿದ್ದ ಪೆಟ್ಟಿನಿಂದಾಗಿ ಕಣ್ಣಿನ ಮಸೂರವೇ ಸ್ಥಳಾಂತರವಾಗಿತ್ತು. ಇದಕ್ಕೂ ಮುನ್ನ ಈ ಮಹಿಳೆ ಚಿಕ್ಕ ವಯಸ್ಸಿನಲ್ಲಿದ್ದಾಗಲೇ ರೇಡಿಯಲ್ ಕೆರಾಟೊಟೊಮಿ ಎಂಬ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಿಕೊಂಡಿದ್ದರು. ಇದರಿಂದ ಕಾರ್ನಿಯಾದ ಶಕ್ತಿಯೂ ಕ್ಷೀಣಿಸಿತ್ತು. ಎಡಗಣ್ಣಿನ ದೃಷ್ಟಿಯನ್ನು ಕಳೆದುಕೊಂಡ ಇವರ ಬಲಗಣ್ಣಿಗೆ ಕ್ಯಾಟರ್‍ಯಾಕ್ಟ್ ಎಂಬ ಕಣ್ಣಿನ ಸಮಸ್ಯೆಯೂ ಆವರಿಸಿಕೊಂಡಿತ್ತು. ಇಷ್ಟೆಲ್ಲ ತೊಂದರೆಗಳ ಜತೆಗೆ ಗ್ಲುಕೋಮಾ, ಜೀವನಶೈಲಿ ಕಾಯಿಲೆ ಮಧುಮೇಹವೂ ಈಕೆಯ ಜೀವಹಿಂಡುತ್ತಿತ್ತು. ಇಷ್ಟಾದರೂ ಕಣ್ಣು ಸರಿಯಾಗಬಹುದು ಎಂಬ ಆಶಾಭಾವನೆಯಿಂದ ಇಲ್ಲಿನ ಆಸ್ಪತ್ರೆಗೆ ಬಂದಾಗ ಈ ಸಂಕೀರ್ಣ ಸಮಸ್ಯೆಯನ್ನು ಹೇಗಪ್ಪಾ ಹೋಗಲಾಡಿಸುವುದು ಎಂಬ ಭಾವನೆಯೂ ಅಗರ್‌ವಾಲ್ಸ್ ಆಸ್ಪತ್ರೆಯ ನುರಿತ ಶಸ್ತ್ರಚಿಕಿತ್ಸಕರಾದ ಡಾ. ರವಿ ಹಾಗೂ ಡಾ. ರಘು ಅವರನ್ನು ಕಾಡಿತ್ತು.

### ದೃಷ್ಟಿ ಮರಳಿದ್ದು ಹೇಗೆ?

‘ಅಬ್ದೆಲ್ಲಾ ಇಲ್ಹಾಂ ನಮ್ಮ ಆಸ್ಪತ್ರೆಗೆ ಬಂದಾಗ ಅವರ ಒಂದು ಕಣ್ಣಿನ ದೃಷ್ಟಿ ಕೇವಲ 6/60 ಇತ್ತು. ಹಾನಿಗೊಳಗಾಗಿದ್ದ ಕಣ್ಣಿನಿಂದ ಧಾರಾಕಾರವಾಗಿ ನೀರು ಬರುತ್ತಿತ್ತು, ತುರಿಕೆ ಮತ್ತು ಸುಡುವ ರೀತಿಯಲ್ಲಿ ಉರಿ ಕಾಣಿಸಿಕೊಂಡಿತ್ತು.



ಯೆಮನ್ ದೇಶದ ಮಹಿಳೆ ಅಬ್ದೆಲ್ಲಾ ಹಾಗೂ ಆಕೆಯ ಪತಿ ಜೊತೆ ಶಸ್ತ್ರಚಿಕಿತ್ಸಕ ಡಾ. ರಘು ನಾಗರಾಜ್